"ಮಳ್ಳ, ನನ್ನ ಅನುಭವದಷ್ಟು ನಿನ್ನ ವಯಸ್ಸ ಆಗಿಲ್ಲ. ಮಂಗಲ ಭವನ ಕಟ್ಟೊ ವಿಚಾರದಾಗ ಯಾರದು ತಕರಾರಿಲ್ಲ. ಕಟ್ಟೊ ಜಾಗದ ಬಗ್ಗೆ ತಕರಾರ ಅದ. ಊರ ಮುಂದ ಸಾಕಷ್ಟು ಜಾಗ ಅದ, ಎಷ್ಟ್ ಬೇಕೋ ಅಷ್ಟ ದೊಡ್ಡದ ಮಂಗಲ ಭವನ ಕಟ್ಟಿಸ, ತಿಳಿತೇನ. ಸುಮ್ನ ಇಲ್ಲದ ಕಾರಬಾರ ಮಾಡಿ ಊರ ಸ್ಥಿತಿ ಹದಗೆಡಿಸಬ್ಯಾಡ." ಎಂಬ ವಿವೇಕವನ್ನು ಪರಪ್ಪಜ್ಜ ಹೇಳಿದ.

"ಆದ್ರೂ ಪರಪ್ಪಜ್ಜ, ಊರವರ ಮಾತಿಗೆ ನೀವ ಬೆಲಿ ಕೊಡವಲ್ರಿ. ನೀವಾ ನೋಡಿರಲಾ, ಎಷ್ಟ್ ದ್ವಡ್ಡ ಗಿಡ ಅದ. ಅಕಸ್ಮಾತ್ ಮುರಕೊಂಡ ಬಿದ್ರ ಕೆಳಗ ಕುಂತವರ ಗತಿಯೇನು ಅನ್ನೂದು ನನ್ನ ಕಾಳಜಿ ಆಗೇದ." ಪಂಚಾಕ್ಷರಿ ಅಂದ.

"ನಿನ್ನ ಕಾಳಜಿ ಏನು ಅನ್ನೂದು ನನಗ ಗೊತ್ತ ಅದ. ಮುರಿದುಕೊಂಡ ಬೀಳೋದು ಈ ಮರ ಅಲ್ಲ. ನಿಮ್ಮಂತವರು ಅಧಿಕಾರಕ್ಕಾಗಿ ಯಾರ ಮೇಲಾದರೂ ಮುರಿದುಕೊಂಡ ಬೀಳ್ತೀರಿ. ಅಧಿಕಾರ ಸಿಗತದಂದ್ರ, ಹ್ಯಾಂವಸ್ತಾನ ಸಾಧಿಸಲಾಕ ನ್ಯಾಯ, ನೀತಿ ಬಿಟ್ಟ ಆದ್ರೂ ಮುರಕೊಂಡ ಬೀಳತಿರಿ. ನೋಡು, ಸುಮ್ನಾ ಶಾಂತ ಇರೋ ಮಂದಿ ತಲಿಯಾಗ ಇಲ್ಲದ್ದ ಬಿತ್ತಬ್ಯಾಡ. ಅದಕ್ ಹೇಳಾಕತ್ತಿನ, ಈ ವಿಷಯದಾಗ ದುಡಿಕೀ ಅವಘಡಕ ಕಾರಣ ಆಗಬ್ಯಾಡ. ಆಲದ ಮರ ಕಡಿಸೊ ವಿಚಾರ ತಲಿಯಾಗಿಂದ ಬಿಟ್ಟುಬಿಡು. ಇಷ್ಟಕ್ಕೂ, ಸ್ವಾತಂತ್ರ್ಯ ಪ್ರೇಮಿಗಳು ನೆಟ್ಟಂತ ಈ ಮರ ಕಡಿಲಾಕ ಯಾರು ಅದೆಂಗ ಹುಕುಂ ಕೊಡ್ತಾರ ನಾವು ನೋಡ್ತಿವಿ" ಎಂದು ಕಡ್ಡಿ ತುಂಡು ಮಾಡಿದಂತೆ ಪರಪ್ಪಜ್ಜ ಹೇಳಿದಾಗ ಪಂಚಾಕ್ಷರಿ, "ಯಾವಾಗ ನೀವು ನಿಮ್ಮ ಮಾತ ನಡಿಬೇಕಂತ ಕುಂತಿರೊ, ನೋಡ್ತಿರಿ. ಪಂಚಾಯತಿ ಮೀಟಿಂಗ್ ಕೂಡಿಸಿ ಮರಕ ಕೊಡಲಿ ಹಾಕಲಿಲ್ಲಂದ್ರ ನಾ ಚೇರ್ಮನ್ ಅಲ್ಲ" ಎಂದು ಎಲ್ಲರ ಮುಂದೆ ಬುಸುಗುಟ್ಟುತ್ತ ಎದ್ದು ಹೊರಟ. ಅವನ ಹಿಂದೆ ಅವರ ಚೇಲಾಗಳೂ ಎದ್ದರು. ತದನಂತರ ಪರಪ್ಪಜ್ಜ ಕಣ್ಣಲ್ಲಿ ನೀರು ತಂದುಕೊಂಡು ಅಂದ: "ಚನ್ನಬಸು, ಇಂವ ಯಾಕ ಹಿಂಗ ಆದ, ಮೊಮ್ಮಗನಿಗಿಂತ ಹೆಚ್ಚಿನ ಮಮತಾ ತೋರ್ಸಿ ಬೆಳಿಸಿದ್ಯಾ. ಅದಕ್ ಪ್ರತಿಫಲ ಕೊಡಲಿಕ ಹತ್ತಿದಾನ ಈಗ."

"ಪರಪ್ಪ ಕಾಕಾ, ನೀವ ಯಾಕ ಅಷ್ಟ ಚಿಂತಿ ಮಾಡ್ತಿರಿ. ಬೊಗಳೊ ನಾಯಿ ಬೊಗಳತನ ಇರ್ತದ. ನಿಮ್ಗ ಗೊತ್ತಿಲ್ಲದ ವಿಷಯ ಏನ ಅದ. ಸುಮ್ನ ಹಳಹಳಿ ಮಾಡಬ್ಯಾಡ್ರಿ. ಬರ್ರಿ ಹೋಗೋಣ. ವಿಶ್ವನಾಥ ಹೇಳಿ ಕಳಿಸಿದ್ರ ಬರ್ತಾನ. ಈ ವಿಷಯದಾಗ ಅವನೂ ಜೊತಿಲಿ ಇದ್ರ ಧೈರ್ಯ ಇರ್ತದ. ಕರೆಸಿಕೊಳ್ಳುವ ವ್ಯವಸ್ಥಾ ಮಾಡೋಣ ಬರ್ರಿ" ಎಂದ ಚನ್ನಬಸಯ್ಯ ಪರಪ್ಪಜ್ಜನ್ನ ಹಿಡಿದುಕೊಂಡು ಕಟ್ಟೆ ಬಿಟ್ಟು ಎದ್ದರು.

★★★

ಈ ಘಟನೆ ನಡೆದು ಮಾರನೆ ದಿನ ಪಟ್ಟಣಕ್ಕೆ ಬಂದ ಶಂಕರನನ್ನು ಕೋರ್ಟ್ ಸಂಕೀರ್ಣದಲ್ಲಿ ಕಂಡ ವಿಶ್ವ, "ಇದೇನು ಶಂಕ್ರು, ಊರಿಂದ ಯಾವಾಗ ಬಂದೆ. ಊರಾಗ ಎಲ್ಲಾ ಹೆಂಗ ಅದಾರ. ಪರಪ್ಪಜ್ಜ ಏನ ಅಂತಾರ" ಎಂದ ಅವನ ಮಾತಿಗೆ ವಿಶ್ವ, "ಖರೇವಂದ್ರ ಅವರಾ... ನನ್ನನ್ನ ಇಲ್ಲಿಗೆ ಕಳಿಸ್ಯಾರ. ಆಲದ ಮರದ ಬಗ್ಗೆ ಇಚಾರ ಮಾಡಲಿಕ ನಿನ್ನನ್ನ ಜಲ್ದಿ ಕರ್ಕೊಂಡ ಬರಲಿಕ್ಕೆ ಹೇಳ್ಯಾರ". "ಹಂಗಾ, ಆದ್ರ ಈಗ ಅರ್ಜೆಂಟ್ ಕೇಸಿಗೆ ನಾನೇ ಅಟೆಂಡ್ ಆಗಬೇಕಾಗೆದ. ಅದನ ಮುಗಿಸಿ ನಾನ ಬಂದ ಬಿಡ್ತೀನಿ. ನೀ ಮನ್ಯಾಗ ಇರು" ಎಂದು ಮನೆ ಬೀಗ ಕೊಟ್ಟು ಕಳಿಸಿದನು.

ವಿಶ್ವ ಕೋರ್ಟ್ ಕೆಲಸ ಮುಗಿಸಿ ಮನೆಗೆ ಬಂದಾಗ ಆಗಲೇ ಸಂಜೆಯಾಗಿತ್ತು.

"ಏನು ಶಂಕ್ರೂ, ಎಲ್ಲಿಗ ಬಂದದ ಮರದ ವಿಚಾರ."

"ಏನ ಮಾಡೂದು, ಊರಾಗ ಪಂಚಾಕ್ಷರಿ ಬ್ಹಾಳ ಹಣಗಲ ಎಬ್ಬಿಸ್ಯಾನ."

"ಹೌದು. ಮನ್ನೆ ಕಂಬಾರ ಚಂದ್ರು ಸಿಕ್ಕಿದ್ದ. ವಿಷ್ಯ ಗೊತ್ತಾತ. ಅಲ್ದ, ಮನ್ನೆನ ಅಪ್ಪಾನು